


ಕನ್ನಡದಲ್ಲಿ ಭಾಷಣ ಮಾಡಬೇಕು. ಅದಕ್ಕೆ ಇಂಗ್ಲಿಷ್‌ನಲ್ಲಿ ಕನ್ನಡ ಭಾಷಣ ಬರೆದುಕೊಡಿ ಡ್ಯಾಡ್...!



ಬೆಂಗ್ಳೂರಲ್ಲಿ ಹೊಸ ಮನೆ ಮಾಡ್ತಿದಿರಾ? 'ಕಸ ವಿಂಗಡಣೆ' ಮಾಡೋಕೆ ಗೊತ್ತಾ?




ಕಸ ನಿರ್ವಹಣೆ ಮತ್ತು ಪರಿಹಾರದ ಬಗ್ಗೆ ಸಂಪರ್ಕಿಸಲು ನಿಮ್ಮ ನಂಬರ್ ಕೊಟ್ಟಿದ್ದಾರೆ.....



ಹೊಸ ಕಚೇರಿಯಲ್ಲಿ ಮೊದಲು ಕಾಲಿಡ ಬೇಡ; ಕೈ ಇಡು ಎಂದು ಪ್ರಸಿದ್ಧ ಜ್ಯೋತಿಷಿ-ಯೊಬ್ಬರು ಹೇಳಿದ್ದಾರಂತೆ ಅವರಿಗೆ...!




ಪಪ್ಪಾ! ಓದು ಓದು ಅಂತೀರಿ. ಈ ದಿನದ ಪತ್ರಿಕೆ ನೋಡಿದ್ದೀರಾ?







ನಾವು ಕರ್ನಾಟಕದಲ್ಲಿ ಮೋಡ ಬಿತ್ತನೆ ಮಾಡಿ, ಆ ಮಳೆ ತಮಿಳುನಾಡಿನಲ್ಲಿ ಬಿದ್ದರೆ ಏನು ಮಾಡುವುದು?

ಒಂದು ಅಂಗಡಿ ಮುಂದೆ ಕೆಳಕಂಡಂತೆ ಒಂದು ತೂಗು ಫಲಕ ಹಾಕಲಾಗಿತ್ತು.

ಬನಾರಸ್ ಸೀರೆ– ರೂ. 40

ನೈಲಾನ್ ಸೀರೆ– ರೂ. 20

ಕಾಟನ್ ಸೀರೆ– ರೂ. 10

ಇದನ್ನು ನೋಡಿದ ಹೆಂಗಸೊಬ್ಬಳು, ತನ್ನ ಗಂಡನ ಬಳಿ 'ರೀ ಐನೂರು ರೂಪಾಯಿ ಕೊಡಿ ನಾನು 10 ಸೀರೆ ತಗೊಂಡು ಬರ್ತೀನಿ' ಎಂದಳು. ಅದಕ್ಕೆ ಅವಳ ಗಂಡ 'ಲೇ ಸೀರೆ ಅಂಗಡಿ ಅಲ್ಲಾ ಕಣೇ ಅದು ಇಸ್ತ್ರೀ ಅಂಗಡಿ' ಎಂದ.

★★★

ಟೀಚರ್: ಪ್ರೀತಿ ಮುಖ್ಯನಾ ಅಥವಾ ಸ್ನೇಹ ಮುಖ್ಯನಾ?

ಗುಂಡ: ನನ್ನ ಪ್ರಕಾರ ಸ್ನೇಹ ಮುಖ್ಯ

ಟೀಚರ್: ಅದು ಹೇಗೆ?

ಗುಂಡ: ಯಾಕಂದ್ರೆ ಪ್ರೀತಿಗೆ ಮದುವೆಯಾಗಿದೆ. ಸ್ನೇಹ ಇನ್ನೂ ಪಿ.ಯು.ಸಿ. ಓದುತ್ತಿದ್ದಾಳೆ.

★★★

ಗುಂಡ: 2012 ರಲ್ಲಿ ಪ್ರಳಯ ಆಗುತ್ತೆ ಅಂತಾ ನನ್ನ ಫ್ರೆಂಡ್ 2011 ರಲ್ಲೇ ಮದುವೆ ಮಾಡ್ಕೊಂಡ.

ತಿಮ್ಮಾ: ಆಮೇಲೆ ಏನಾಯಿತು?

ಗುಂಡ: ಈಗ ಪ್ರಳಯ ಯಾವಾಗ ಆಗುತ್ತೆ ಅಂತಾ ಕಾಯ್ತಾ ಇದ್ದಾನೆ.

★★★



ಶಿಕ್ಷಕ: ಕರ್ತವ್ಯ ಹಾಗೂ ಭ್ರಮೆ ಇವುಗಳಿಗೆ ಒಂದೊಂದು ಉದಾಹರಣೆ ಕೊಡಿ.

ತಿಮ್ಮ: ಪಾಠ ಮಾಡುವದು ನಿಮ್ಮ ಕರ್ತವ್ಯ. ಪಾಠವನ್ನು ನಾವು ಕೇಳುತ್ತಿದ್ದೇವೆ ಎಂದು ಭಾವಿಸುವುದು ನಿಮ್ಮ ಭ್ರಮೆ!

★★★

ಗುಂಡ: ಕಪ್ಪೆಗಳಿಗೆ ಮದುವೆ ಮಾಡಿಸಿದರೆ ಮಳೆ ಬರುತ್ತದೆ ಎಂದು ಎರಡು ಕಪ್ಪೆಗಳಿಗೆ ಮದುವೆ ಮಾಡಿಸಿದೆವು. ಆದರೆ ಈಗ ಮಳೆ ಜಾಸ್ತಿಯಾಗಿದೆಯಲ್ಲ ಏನು ಮಾಡುವುದು?

ತಿಮ್ಮ: ಆ ಕಪ್ಪೆಗಳಿಗೆ ಡೈವರ್ಸ್ ಕೊಡಿಸಬೇಕು.

★★★

ಒಬ್ಬನು ಕಂಪೆನಿಯ ನೌಕರಿಗಾಗಿ ಸಂದರ್ಶನಕ್ಕೆ ಹೋಗಿದ್ದನು.

ಬಾಸ್: ಜಗತ್ತಿನ ಮೂರು ಪ್ರಸಿದ್ಧ ವ್ಯಕ್ತಿಗಳು ಯಾರು?

ಅಭ್ಯರ್ಥಿ: ಮಹಾತ್ಮ ಗಾಂಧಿ, ಜಾರ್ಜ್ ಬುಶ್ ಹಾಗೂ ನೀವು!

**-ಮುರಲೀಧರ ಕುಲಕರ್ಣಿ, ಬೀದರ್**